3ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚನ್ನರಾಯಪಟ್ಟಣ.

CC.NO.974/2018

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಅರುಣಾಕ್ಷಿ | C.W – 1 |
| ತಂದೆಯ ಹೆಸರು | ಃ | ಅಶೋಕ್ ಕುಮಾರ್ | P.W – 1 |
| ವಯಸ್ಸು | ಃ | 39 ವರ್ಷ | |
| ಉದ್ಯೋಗ | ಃ | ಶಿಕ್ಷಕಿ | ಪ್ರಮಾಣ ವಚನ ಬೋಧಿಸಲಾಯಿತು |
| ವಾಸ | ಃ | ಹಿರಿಸಾವೇ ಗ್ರಾಮ | ದಿನಾಂಕಃ 04-07-2019 |

---

<u>ಮುಖ್ಯ ವಿಚಾರಣೆ ಃ- ನುರಿತ ಎ.ಪಿ.ಪಿ. ಯವರಿಂದ</u>

ಆರೋಪಿ ಗೊತ್ತು. ದಿಃ 26-12-2014 ರಂದು ಬೆಳಿಗ್ಗೆ 9.45 ಗಂಟೆ ಸಮಯದಲ್ಲಿ ಹಿರಿಸಾವೆಯಿಂದ ಬೆಳಿಗೆ ಹಳ್ಳಿ ಗ್ರಾಮದ ಶಾಲೆಗೆ ಕೆಲಸಕ್ಕಾಗಿ ನಡೆದುಕೊಂಡು ಹೋಗುತ್ತಿರುವಾಗ ನುಗ್ಗೇಹಳ್ಳಿ ರಸ್ತೆಯ ತಮ್ಮಣ್ಣರವರ ಮನೆಯ ಹತ್ತಿರ ಬೈಕ್‌ನಲ್ಲಿ ಇಬ್ಬರು ವ್ಯಕ್ತಿಗಳು ಬಂದು ಮಂಜೇಗೌಡ ಗೊತ್ತಾ ಎಂದು ಕೇಳಿದ್ದು, ನಾನು ಗೊತ್ತಿಲ್ಲ ಎಂದು ಹೇಳಿ ಮುಂದೆ ಹೋಗುತ್ತಿರುವಾಗ ಸದರಿ ವ್ಯಕ್ತಿಗಳು ಒಮ್ಮೆಲೆ ಬಂದು ನನ್ನ ಬಾಯಿ ಮುಚ್ಚಿ ಕೊರಳಲ್ಲಿದ್ದ 40 ಗ್ರಾಂ. ಚಿನ್ನದ ಸರವನ್ನು ಕಿತ್ತುಕೊಂಡು ಹೋಗಿರುತ್ತಾರೆ. ನಂತರ ನಾನು ನಮ್ಮ ಸಂಬಂಧಿಕರಿಗೆ ಫೋನ್ ಮುಖಾಂತರ ವಿಚಾರ ತಿಳಿಸಿ ನಂತರ ಠಾಣೆಗೆ ದೂರು ಸಲ್ಲಿಸಿರುತ್ತೇನೆ. ದೂರನ್ನು ನಿಪಿ-1 ಎಂದು , ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರು ನೀಡಿದ ದಿನ ಸಂಜೆ 5.00 ಗಂಟೆ ಸಮಯದಲ್ಲಿ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿರುತ್ತಾರೆ. ಮಹಜರ್ ಸಮಯದಲ್ಲಿ ನಾನು ಸಹಿ ಮಡಿರುತ್ತೇನೆ. ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದುಗುರುತಿಸಲಾಯಿತು. ಘಟನೆ ನಡೆದ 2 ತಿಂಗಳ ನಂತರ ಚನ್ನರಾಯಪಟ್ಟಣ ಪೊಲೀಸರು ಠಾಣೆಗೆ ಕರೆಸಿ ಸಂಶಯದ ಮೇಲೆ ಆರೋಪಿಗಳ ಫೊಟೋಗಳನ್ನು ತೋರಿಸಿರುತ್ತಾರೆ. 2 ತಿಂಗಳ ನಂತರ ಪೊಲೀಸರು ಆರೋಪಿಗಳನ್ನು ಹಾಗೂ ಕಳ್ಳತನವಾದ ಸರವನ್ನು ತೋರಿಸಿರುತ್ತಾರೆ. ಸದರಿ ಸರವನ್ನು ನೋಡಿ ಗುರುತಿಸಿರುತ್ತೇನೆ. ಸದರಿ ಸರವನ್ನು ಮು.ಮಾ-1 ಎಂದು ಗುರುತಿಸಲಾಯಿತು, ಸದರಿ ಸರಕ್ಕೆ ಸಂಬಂಧಿಸಿದ ಫೋಟೋ ಮತ್ತು ಸಿಡಿಯನ್ನು ಮೂಲ ಪ್ರಕರಣ ಸಂಖ್ಯೆ 583ಃ2016 ಹಾಜರು ಪಡಿಸಿದ್ದು , ಅವುಗಳನ್ನು ನಿಪಿ-3, 4 ಎಂದು ಗುರುತಿಸಲಾಯಿತು. ಸರವನ್ನು ಮು.ಮಾ-1 ಎಂದು ಗುರುತಿಸಿ ನಂತರ ಚಾಸಾ-1 ರವರ ವಶಕ್ಕೆ ನೀಡಿರುತ್ತೇವೆ. ಆ ದಿನ ಪೊಲೀಸರು ಠಾಣೆಯಲ್ಲಿ ತೋರಿಸಿದ ವ್ಯಕ್ತಿ ಮಾನ್ಯ ನ್ಯಾಯಾಲಯದ ಮುಂದಿರುವ ಆರೋಪಿಯಾಗಿದ್ದಾನೆ. ಪೊಲೀಸರಿಗೆ ಮರು ಹೇಳಿಕೆ

ನೀಡಿದ್ದೇನೆ.

<u>ಪಾಟೀಸವಾಲುಃ </u>ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸ.ಇ.ಎ.ಒ.,**